SRI C. K. RAJAIAH SETTY.—What is the strength of the hostel? Is not the present building sufficient to accommodate all the students?

SRI N. RACHIAH.—I do not know whether the Hon'ble Member is aware that in Chamarajnagar and Heggadadevenakote taluks, there are a larger number of school-going children among Harijans and even if we build another floor, there will be a sufficient number forthcoming.

Short Term and Medium Term Loans advanced by the District Central Co-operative Bank, Bangalore.

*Q.—410. SRI K. V. BYRE GOWDA (Bangalore North).—

Will the Government be pleased to state:—

(*a*) the amount given from the District Central Co-operative Bank Ltd., Bangalore, through Primary Societies as short term loan and as medium term loan (Societywar information may be furnished);

(*b*) the number of applications pending before the District Central Co-operative Bank from each Society for Short term and Medium term loans;

(*c*) what arrangement the District Central Co-operative Bank has made to meet the demand of the Primary Societies, regarding Medium term and Short term loans?

*A.—SRI MALI MARIAPPA (Minister for Co-operation).—

(*a*) *Vide* Statement I. (§Copy placed on the Table of the House).

(*b*) *Vide* Statement II. (§Copy placed on the Table of the House).

[§Placed in the Legislature Library No. 15/L. A. Bud. 59.]

(*c*) The District Bank has been able to meet the demands of Primary Societies with regard to Short Term loans to the extent applied for by them As regards Medium Term loans the Reserve Bank would permit the District Bank to disburse loans to the extent of their owned capital. The demand for Medimum Term loans from Primaries in Bangalore District is far in excess of the owned capital of the District Bank. Unless the Share capital of District Bank is further strengthened the Reserve Bank does not agree for further release of Medium Term loans from District Bank, Bangalore. However the Reserve Bank on the representation of District Bank has agreed to allot a further sum of Rs. 1½ lakhs for issue of Medium Term loans subject to the condition that 50 per cent of this amount is met by District Bank.

Loans Advanced by the District Co-operative Bank, Bangalore.

*Q.—586. SRI S. R. RAMAIAH (Hoskote).—

Will the Government be pleased to state:—

(*a*) the amount given to the ryots through the District Co-operative Bank, Bangalore, in each taluk as short term, medium term and long term loans since its inception;

(*b*) the purposes for which money is advanced for short, medium and long term loans?

*A.—SRI MALI MARIAPPA (Minister for Co-operation).—

(*a*) *Vide* Statement (Copy placed on the Table of the House).

[Placed in the Legislature Library No. 15/L. A. Bud. 59.]

Long term loans are not advanced by District Central Co-operative Banks.

(*b*)—

Short term loans:

The short term loans are issued to ryots for seasonal agricultural operations, *i.e.*, purchase of manures, seeds, weeding, harvesting, etc.

Medium term loans:

The medium term loans are issued for the following purposes:—

1 Sinking of wells and maintenance of irrigation sources.

2 Purchase of irrigation pumpsets.

3 Purchase of bullocks and carts.
4 Reclamation and Bunding.
5 Orchards and Plantations.
6 Construction of Farm Houses.
7 Poultry Farming.
8 Piggery.

Long term loans:

1 Discharge of prior debts.
2 For land improvement upto Rs. 5,000. The long term loans are issued only by Land Mortgage Banks.

ಶ್ರೀ ಕೆ. ಎ. ಬೈರೇಗೌಡ.—ಮಾಡಿಯಂ ಸಾಲವನ್ನು ಜಾಸ್ತಿ ಪಡೆಯಬೇಕಾಗಿದ್ದರೆ ಷೇರ್ ಕ್ಯಾಪಿಟಲನ್ನು ಪ್ರೈಮರಿ ಸೊಸೈಟಿಗಳವರು ಜಾಸ್ತಿ ಮಾಡಿಕೊಳ್ಳಬೇಕೆಂಬುದಾಗಿ ತಿಳಿಸೋಣವಾಗಿದೆ. ಆ ರೀತಿ ಆ ಪ್ರೈಮರಿ ಸೊಸೈಟಿಗಳವರಿಗೆ ಷೇರ್ ಕ್ಯಾಪಿಟಲ್ ಬಗ್ಗೆ ಏನಾದರೂ ಒಂದು ಟಾರ್ಗೆಟ್ಟನ್ನು ಫಿಕ್ಸ್ ಅಫ್ ಮಾಡಿ ಕಳುಹಿಸಿಕೊಟ್ಟಿದ್ದೀರಾ ?

†ಶ್ರೀ ಮಾಲ ಮರಿಯಪ್ಪ.—ಆದರೆ ಇಲ್ಲಿಯವರೆಗೂ ಷಾರ್ಟ್‌ಟರ್ಮ್ ಲೋನುಗಳನ್ನು ಯಾವ ಅಭ್ಯಂತರವೂ ಇಲ್ಲದಂತೆ ಕೊಡಲು ಸಾಧ್ಯವಾಗಿದೆ. ಆದರೆ ಈ ಮಾಡಿಯಂ ಲೋನುಗಳನ್ನು ಮಾತ್ರ ಈ ವರ್ಷ ಕೇಳಿದಷ್ಟನ್ನೂ ಪೂರ್ತಿಯಾಗಿ ಕೊಡಲಿಕ್ಕಾಗಲಿಲ್ಲ. ಆದುದ ರಿಂದಲೇ ಈ ವರ್ಷ ಇದಕ್ಕಾಗಿ ಮೂರು ಲಕ್ಷ ರೂಪಾಯಿಗಳನ್ನು ಹೆಚ್ಚಿಗೆ ಕೊಟ್ಟಿದೆ.

ಶ್ರೀ ಕುಂದೂರು ರುದ್ರಪ್ಪ.—ಈ ಮಾಡಿಯಂ ಸಾಲ ಕೊಡತಕ್ಕ ಬಗ್ಗೆ ಸರ್ಕಾರದವರ ಪಾಲಸಿ ಏನು ?

ಶ್ರೀ ಮಾಲ ಮರಿಯಪ್ಪ.—ಇದು ಆಯಾಯ ಬ್ಯಾಂಕುಗಳೂ ಸೊಸೈಟಿಗಳೂ ಹೊಂದಿರತಕ್ಕ ಮೂಲ ಬಂಡಾವಳವನ್ನು ಅವಲಂಬಿಸಿದೆ ಎಂಬುದಾಗಿ ಹಿಂದೆಯೇ ಸ್ಪಷ್ಟಪಡಿಸಿದ್ದೀವೆ.

ಶ್ರೀ ಕುಂದೂರು ರುದ್ರಪ್ಪ.—ಮಾಡಿಯಂ ಟರ್ಮ್ ಸಾಲಗಳನ್ನು ಕೊಡಲು ರೆಕಾರ್ಡ್ ಬಿಲ್ಟ್‌ಅಪ್ ಆಗುವುದೇ ಬಹಳ ನಿಧಾನ ; ಕಾರಣವೇನು ?

ಶ್ರೀ ಮಾಲ ಮರಿಯಪ್ಪ.—ಅದಷ್ಟು ಜಾಗ್ರತೆ ತೀರ್ಮಾನ ಮಾಡಿಕೊಡಬೇಕೆಂದು ಹೇಳಿದ್ದೇವೆ.

ಶ್ರೀ ಎನ್. ಆರ್. ರಾಮಯ್ಯ.—(ಸಿ)ಗೆ ಒದಗಿಸುವ ಉತ್ತರಕ್ಕನುಗುಣವಾಗಿ ಆ ಬಗ್ಗೆ ಏನು ಕಾರ್ಯಕ್ರಮಗಳನ್ನು ಕೈಗೊಂಡಿದ್ದಾರೆ ?

ಶ್ರೀ ಮಾಲ ಮರಿಯಪ್ಪ.—ಈ ಸುಗ್ಗಿಯ ಕಾಲದಲ್ಲಿ ಪ್ರತಿಯೊಂದು ಸೊಸೈಟಿಯ ಮತ್ತು ಬ್ಯಾಂಕಿನ ಇನ್‌ಸ್ಪೆಕ್ಟರುಗಳೂ ಹೆಚ್ಚು ಷೇರ್ ಪೊಬಲಗನ್ನು ಕಲೆಕ್ಟ್ ಮಾಡಿ ಈ ಕ್ರೆಡಿಟ್ ಸಾಲದ ಸಂಸ್ಥೆಗಳು ಪ್ರಗತಿ ಮಾರ್ಗದಲ್ಲಿ ಹೋಗುವಂತೆ ಮಾಡಲು ಎಲ್ಲಾ ಕಾರ್ಯಕ್ರಮಗಳನ್ನೂ ಕೈಗೊಳ್ಳಬೇಕೆಂದು ತಿಳಿಸಿದ್ದೇವೆ.

ಶ್ರೀ ಎನ್. ಆರ್. ರಾಮಯ್ಯ.—ಎರಡನೆಯ ಪಂಚವಾರ್ಷಿಕ ಯೋಜನೆಯ ಅಂಗವಾಗಿ ಈ ಷೇರ್ ಕ್ಯಾಪಿಟಲನ್ನು ಹೆಚ್ಚಿಸುವ ವಿಚಾರದಲ್ಲಿ ಏನಾದರೂ ಟಾರ್ಗೆಟ್ ಫಿಕ್ಸ್‌ಮಾಡಿದ್ದೀರಾ ?

ಶ್ರೀ ಮಾಲ ಮರಿಯಪ್ಪ.—ಈ ಸಾಲ ನೀಡತಕ್ಕ ಅಗತ್ಯ ಆಯಾ ಬ್ಯಾಂಕುಗಳಿಗೆ ಎಷ್ಟಿಷ್ಟಿರುತ್ತದೆಂಬುದನ್ನು ಆ ಹಿಂದಿನ ಒಂದೆರಡು ಸಾಲುಗಳಲ್ಲಿ ಸಾಲಕ್ಕಾಗಿ ಬಂದಿರತಕ್ಕ ಅರ್ಜಿಗಳನ್ನು ಅವಲೋಕಿಸಿ ನೋಡಿದರೆ ಅವರು ತಮ್ಮ ಷೇರ್ ಬಂಡವಾಳವನ್ನು ಎಷ್ಟರಮಟ್ಟಿಗೆ ಹೆಚ್ಚಿಸಿಕೊಳ್ಳಬೇಕೆಂಬುದು ಆಯಾ ಸಂಸ್ಥೆಗಳಿಗೆ ಗೊತ್ತಾಗುತ್ತದೆ.

ಶ್ರೀ ಡಿ. ಟಿ. ಸೀತಾರಾಮರಾವ್.—ಈಗ ಡಿಸ್ಟ್ರಿಕ್ ಬ್ಯಾಂಕುಗಳಲ್ಲಿ ಸಾಲ ಹೊಂದಿರತಕ್ಕ ಜನರಲ್ಲಿ ನೂರಕ್ಕೆ 80 ರಷ್ಟು ಜನ ಸಾಲ ತೀರಿಸಿರುತ್ತಾರೆ. ಇನ್ನು ಉಳಿದ 20 ಪರ್ಸೆಂಟ್ ಸಾಲಕ್ಕಾಗಿ ಸಾಲವನ್ನೇ ಕೊಡದಿರುವುದು ಶೇಕಡ 80 ಜನರಿಗೆ ತೊಂದರೆ ಉಂಟು ಮಾಡುವುದಿಲ್ಲವೇ ?

ಶ್ರೀ ಮಾಲ ಮರಿಯಪ್ಪ.—ಆದರೂ ಈ ಪ್ರೈಮ್ರೇಟ್ ಬ್ಯಾಂಕುಗಳಲ್ಲಿ ಅಂಥ ಒಂದು ನಿರ್ಬಂಧವಿರುವುದು ಒಳ್ಳೆಯದೆಂಬ ದೃಷ್ಟಿಯಿಂದ ಆ ರೀತಿ ಮಾಡಲಾಗಿದೆ.

Sri G. VENKATAI GOWDA.—Is it not desirable that co-operative institutions other than Land Mortgage Banks, should also issue long-term loans ?

ಶ್ರೀ ಮಾಲ ಮರಿಯಪ್ಪ.—ಈ ವರ್ಷ ಲ್ಯಾಂಡ್ ಮಾರ್ಟ್ಗೇಜ್ ಬ್ಯಾಂಕಿನಲ್ಲೂ ಲ್ಯಾಂಡ್ ಇಂಪ್ರೂವ್‌ಮೆಂಟ್ ಬಗ್ಗೆ ಹೆಚ್ಚು ಸಾಲ ಕೊಡಲಾಗುತ್ತಿದೆ.

ಶ್ರೀ ಬಿ. ಶಂಕರಪ್ಪ.—ರಿಜಿಸ್ಟ್ರೇಷನ್ ಮತ್ತು ಎಕಂಬ್ರೆನ್ಸ್ ಸರ್ಟಿಫಿಕೇಟುಗಳ ಖರ್ಚು ವೆಚ್ಚದಲ್ಲಿ ರಿಯಾಯಿತಿ ತೋರಿಸುತ್ತಿಲ್ಲ ; ಕಾರಣವೇನು ?

ಶ್ರೀ ಮಾಲ ಮರಿಯಪ್ಪ.—ತಾವು ಆರ್ಡರನ್ನು ಸರಿಯಾಗಿ ನೋಡಿಲ್ಲವೆಂದು ಕಾಣುತ್ತಿದೆ. ಮತ್ತೊಮ್ಮೆ ಆರ್ಡರನ್ನು ತಾವು ನೋಡಿ.

ಶ್ರೀ ಎನ್. ಹುಚ್ಚಮಾಸ್ತಿಗೌಡ. ಮಾಡಿಯಂ ಸಾಲಕ್ಕೆ ಅರ್ಜಿ ಹಾಕಿದ ವರಲ್ಲಿ ಅನೇಕರಿಗೆ ಆ ಸಾಲ ದೊರಕಿಲ್ಲ ವೆಂಬುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಶ್ರೀ ಮಾಲ ಮರಿಯಪ್ಪ.—ಈ ವರ್ಷ ಮಾತ್ರ ಸ್ವಲ್ಪ ಕಡಮೆ ಬಿದ್ದಿರುತ್ತದೆಂದು ಗೊತ್ತಾಗಿದೆ.

ಶ್ರೀ ಎಚ್. ಹುಚ್ಚಮಾಸ್ತಿಗೌಡ.—ಹಾಗೆ ಕಡಮೆ ಬಿದ್ದ ಹಣವನ್ನು ಸರಿಪಡಿಸುವುದಕ್ಕೆ ಏನು ಪ್ರಯತ್ನ ಮಾಡಿದ್ದೀರಿ ?

ಶ್ರೀ ಮಾಲ ಮರಿಯಪ್ಪ.—ಜಿಲ್ಲಾ ಬ್ಯಾಂಕುಗಳವರೂ ಮತ್ತೆ ಪ್ರೈಮರಿ ಕೋ-ಆಪರೇಟೀವ್ ಸೊಸೈಟಿಗಳವರೂ ತಮ್ಮ ಷೇರ್ ಬಂಡವಾಳವನ್ನು ಜಾಸ್ತಿ ಮಾಡಿಕೊಳ್ಳಬೇಕೆಂಬುದಾಗಿ ತಿಳಿಸಿದ್ದೇವೆ. ರಿಜರ್ವ್ ಬ್ಯಾಂಕಿನವರಿಗೂ ಸಹ ಸ್ವಲ್ಪ ಹೆಚ್ಚಿನ ದಾಮಾಷಾದಲ್ಲಿ ಸಾಲ ನೀಡಲು ಕೇಳಿಕೊಂಡಿದೆ.

ಶ್ರೀ ಕುಂದೂರು ರುದ್ರಪ್ಪ.—ಹೋದ ಸಾಲನಲ್ಲಿ ಎಕಂಬ್ರೆನ್ಸ್ ಸರ್ಟಿಫಿಕೇಟಿನ ಬಗ್ಗೆ ಮೂರು ಆಣೆ ತೆಗೆದುಕೊಳ್ಳುತ್ತಿದ್ದರು. ಈಗ ಒಂಬತ್ತು ಆಣೆ ತೆಗೆದುಕೊಳ್ಳುತ್ತಿದ್ದಾರೆ. ಇದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಮಾಲ ಮರಿಯಪ್ಪ.—ಈ ಪ್ರಶ್ನೆ ಸಂಬಂಧ ಎಲ್ಲದ್ದು—ಆದರೂ ಪರಿಶೀಲನೆ ಮಾಡುತ್ತೇನೆ.

Sri C. J. MUCKANNAPPA.—May I know what percentage of the agricultural classes in the State benefited by the short-term and medium-term loans ?

ಶ್ರೀ ಮಾಲ ಮರಿಯಪ್ಪ.—ಈ ಬಗ್ಗೆ ಬೇರೆ ಒಂದು ಪ್ರಶ್ನೆಯನ್ನು ಕಳುಹಿಸಿದರೆ ಆ ಮಾಹಿತಿಗಳನ್ನು ಒದಗಿಸಲಾಗುತ್ತದೆ.

Sri G. VENKATAI GOWDA.—Has it come to the notice of Government that certain Societies registered under the

(SRI G. VENKATAI GOWDA)

Madras Societies Act have not received this concession?

Sri MALI MARIAPPA.—I do not know. I will have to verify it.

ಶ್ರೀ ಎಚ್. ಜಿ. ನರಸಿಂಹೇಗೌಡ.—ರಿಕಾರ್ಡುಗಳ ಹಿಡಿತ ಬಹಳ ಜಾಸ್ತಿಯಾಗಿರುವುದರಿಂದ ಜನಗಳು ಮಧ್ಯಮಾವಧಿ ಸಾಲವನ್ನು ತೆಗೆದುಕೊಳ್ಳುವುದಕ್ಕೆ ಮುಂದೆ ಬರುವುದು ಕಡಮೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಮಾಲಿ ಮರಿಯಪ್ಪ.—ಅದು ಅಷ್ಟು ಸರಿಯಿಲ್ಲ. ಮಧ್ಯಮಾವಧಿ ಸಾಲಕ್ಕೆ ಸಾಕಷ್ಟು ಮತ್ತು ಹೆಚ್ಚಿನ ಪ್ರಮಾಣದಲ್ಲಿ ಅರ್ಜಿಗಳು ಬರುತ್ತಿವೆ. ಅವುಗಳನ್ನು ಆದಷ್ಟು ಜಾಗ್ರತೆ ವಿಲೇವಾರಿಯಾಗಿ ಹಣ ಸಂದಾಯವಾಗುತ್ತಿದೆ.

ಶ್ರೀ ಬಿ. ಎಲ್. ನಾರಾಯಣಸ್ವಾಮಿ.—ಬೆಂಗಳೂರು ಜಿಲ್ಲೆಗೆ ಆಡಿಷನಲ್ ಅಲಾಟ್‌ಮೆಂಟ್ ಕೊಡಲಿಕ್ಕೆ ಇದ್ದ ವಿಶೇಷ ಕಾರಣಗಳೇನು?

ಶ್ರೀ ಮಾಲಿ ಮರಿಯಪ್ಪ.—ಬೆಂಗಳೂರಿನ ಸುತ್ತ ಮುತ್ತ ಸ್ವಲ್ಪ ಜಮೀನು ಬಹಳ ಅಭಿವೃದ್ಧಿಯಾಗುತ್ತಿದೆ. ಹಣ್ಣು ಹಂಪಲುಗಳನ್ನು ವಿಶೇಷವಾಗಿ ಬೆಳೆಯುತ್ತಿದ್ದಾರೆ. ನಣ್ಣ ನಣ್ಣ ಬಾವಿಗಳನ್ನು ತೆಗೆಯುತ್ತಿದ್ದಾರೆ. ತಾಲ್ಲೂಕು ಪ್ರದೇಶಗಳಲ್ಲಿ ಸಹ ವ್ಯವಸಾಯಾಭಿವೃದ್ಧಿ ಇತ್ಯಾದಿ ಕೆಲಸಗಳು ಹೆಚ್ಚಾಗಿ ನಡೆಯುತ್ತಿವೆ. ಅದಕ್ಕೋಸ್ಕರವಾಗಿ ಅಲಾಟ್ ಮಾಡಿದ್ದೇವೆ.

ಶ್ರೀ ಇ. ನಾರಾಯಣಗೌಡ.—ಅಲ್ಪಕಾಲಾವಧಿ ಸಾಲವನ್ನು ಫೆಬ್ರುವರಿ ತಿಂಗಳಿನಲ್ಲಿ ವಾಪಸು ಕೊಡಬೇಕೆಂದು ಮಾಡಿರುವುದರಿಂದ ಎಷ್ಟೋ ಜನರಿಗೆ ಸುಗ್ಗಿ ಆಗದೆ ಹಣ ಬಂದಿರುವುದಿಲ್ಲವಾಗಿ ಬಹಳ ಅನಾನುಕೂಲವಾಗುತ್ತದೆ. ಆದ್ದರಿಂದ ಈ ಸಾಲವನ್ನು ಜೂನ್‌ತಿಂಗಳವರೆಗೆ ವಸೂಲು ಮಾಡುವುದನ್ನು ಮುಂದುವರಿಸುವುದಕ್ಕೆ ಸಾಧ್ಯವೇ?

ಶ್ರೀ ಮಾಲಿ ಮರಿಯಪ್ಪ.—ಹಾಗೆ ಮಾಡಲು ಆಗುವುದಿಲ್ಲ. ಒಂದೊಂದು ಸ್ಥಳದಲ್ಲಿ ಒಂದೊಂದು ಬೆಳೆ ಒಂದೊಂದು ಕಾಲದಲ್ಲಿ ಬರುತ್ತದೆ. ಅಂಥ ಕಡೆಗಳಲ್ಲಿ ರೂಲ್ಸನ್ನು ಸ್ವಲ್ಪ ಸಡಿಲಗೊಳಿಸಿ, ಸ್ಥಳದ ವಿದ್ಯಮಾನಕ್ಕನುಗುಣವಾಗಿರುವಂತೆ ಮಾಡಬೇಕೆಂದು ಆಲೋಚನೆ ಮಾಡಲಾಗಿದೆ.

ಶ್ರೀ ಬಿ. ಎಲ್. ನಾರಾಯಣಸ್ವಾಮಿ.—ಕೋಲಾರ ಜಿಲ್ಲೆಗೆ ಕೊಟ್ಟಿದ್ದ ಅಲಾಟ್‌ಮೆಂಟ್ ಮುಗಿದು ಸುಮಾರು ಎರಡು ಲಕ್ಷ ರೂಪಾಯಿನ ದರಖಾನ್ತುಗಳು ಉಳಿದಿರುವುದು ಸರ್ಕಾರಕ್ಕೆ ಗೊತ್ತಿದೆಯೇ?

ಶ್ರೀ ಮಾಲಿ ಮರಿಯಪ್ಪ.—ಕೋಲಾರ ಜಿಲ್ಲೆಗೆ ಸಹ ವಿಶೇಷ ಕಾರಣಕ್ಕೋಸ್ಕರ ಹೆಚ್ಚುವರಿ ಮೊತ್ತವನ್ನು ಅಲ್ಲಿಯ borrowing capacityಗಿಂತ ಹೆಚ್ಚು ಕೊಟ್ಟಿದೆ.

ಶ್ರೀ ಕೆ. ಎಲ್. ನರಸಿಂಹಯ್ಯ.—ಈ ಸಾಲ ಕೊಡುವ ರಿಯಾಯಿತಿಗಳನ್ನು ಒಂದೊಂದು ವರ್ಷಕ್ಕೆ ಮುಂದುವರಿಸುವುದರಿಂದ ರೈತನಿಗೆ ತೊಂದರೆಯಾಗುತ್ತಿದೆ. ಮದರಾಸ್ ರಾಜ್ಯದಲ್ಲಿರುವಂತೆ 10 ವರ್ಷ ಒಟ್ಟಿಗೆ ಮಾಡುತಿರಾ?

ಶ್ರೀ ಮಾಲಿ ಮರಿಯಪ್ಪ.—ಪರಿಶೀಲನೆ ಮಾಡೋಣ.

ಶ್ರೀ ಎಸ್. ಆರ್. ರಾಮಯ್ಯ.—ಬಡ್ಡಿಯ ದರವನ್ನು ಈಗ 6¼ ರಿಂದ 7¼ಗೆ ಏರಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಮಾಲಿ ಮರಿಯಪ್ಪ.—ಆ ವಿಷಯ ಇದರಲ್ಲಿ ಉದ್ಭವಿಸಾಗುವುದಿಲ್ಲ.

Applications pending for Grant of Permits in the Regional Transport Office, Shimoga.

*Q.—479. Sri Kundur RUDRAPPA (Channagiri).—

Will the Government be pleased to state :—

(*a*) the number of applications pending before the Regional Transport Authority, Shimoga, praying for grant of temporary and pucca permits ;

(*b*) since how long they are pending?

A.—Sri B.D. JATTI (Chief Minister).—

		No of applications pending
(*a*)	For grant of pucca permits.	280
	For grant of temporary permits	52
(*b*)	*Pucca permits.*	
1955	... ...	1
1956	... ...	11
1957	... ...	153
1958	... ...	115
	Temporary permits.	
1958	... ...	5
1959	... ...	47
	(For 3 months)	

ಶ್ರೀ ಕುಂದೂರು ರುದ್ರಪ್ಪ.—ಈ 280 ಅರ್ಜಿಗಳೂ 1955 ರಿಂದ 1958ವರೆಗೆ ವಿಲೇ ಆಗದೆ ಉಳಿದಿವೆ. ಇದಕ್ಕೆ ಕಾರಣವೇನು?

†ಶ್ರೀ ಬಿ. ಬಸವಲಿಂಗಪ್ಪ.—1957ನೆಯ ಏಪ್ರಿಲ್ ತಿಂಗಳಿನಲ್ಲಿ ಶಿವಮೊಗ್ಗ ಜಿಲ್ಲೆಯನ್ನು ಮೈಸೂರು ಡಿವಿಜನ್ನಿಗೆ ಸೇರಿಸಿದವು. ಆನಂತರ 1ನೆಯ ಜನವರಿ 1958ರಲ್ಲಿ reorganisation ಆಯಿತು. ಆ ಪ್ರಕಾರ ಪ್ರತಿಯೊಂದು ಡಿಸ್ಟ್ರಿಕ್ಟಿನಲ್ಲಿಯೂ ಒಂದೊಂದು ರೀಜನಲ್ ಟ್ರಾನ್ಸ್‌ಪೋರ್ಟ್ ಆಫೀಸನ್ನು ಮಾಡಿದೆ. ಈ ಕೇಸುಗಳೆಲ್ಲ ಇಲ್ಲಿಂದ ಅಲ್ಲಿಗೆ, ಅಲ್ಲಿಂದ ಇಲ್ಲಿಗೆ ಹೋಗಿ ಬರುವುದರಲ್ಲಿ ತಡವಾಗಿದೆ. Inter-regionಗೆ ಸಂಬಂಧಿಸಿದ ಏನಾದರೂ ಒಂದು ಮಾರ್ಗವನ್ನು ತೆರೆಯತಕ್ಕ ಸಂದರ್ಭ ಬಂದಾಗ ಎರಡು ಪ್ರದೇಶಗಳ ಅಭಿಪ್ರಾಯವನ್ನೂ ಪಡೆಯಬೇಕಾಗುತ್ತದೆ. ಮತ್ತು S.T.A. ಅಭಿಪ್ರಾಯ ಪಡೆಯಬೇಕಾಗುತ್ತದೆ. ಅನಂತರ ಪರ್ಮಿಟ್‌ಗಳನ್ನು ಕೊಡುವುದರಲ್ಲಿ ಆಯಾ ಪ್ರದೇಶಕ್ಕೆ ಬಿಡಬೇಕು. ಇಂಥ ಪರಿಸ್ಥಿತಿ ಇರುವುದರಿಂದ, R.T.A. ಮತ್ತು S.T.A. ಒಂದು semi judicial body ಆಗಿರುವುದರಿಂದ ಈ ರೀತಿ ತಡವಾಗುತ್ತಿದೆ. ಉದ್ದೇಶ ಪೂರ್ವಕವಾಗಿ ತಡ